UNIVERSITY OF MYSORE

Department of Studies in Sanskrit

# WATER CONCEPT IN SANSKRIT LITERATURE



# WATER CONCEPT
# IN
# SANSKRIT LITERATURE

## EDITORIAL COMMITEE :


**Dr. K. Narayana Bhatta**
Associate Professor and Chairman, DOS in Sanskrit, UoM.

**Dr. R. Suresha**
Guest Faculty, DOS in Sanskrit, UoM.

**Dr. Suresh Hegde**
Guest Faculty, DOS in Sanskrit, UoM.

**Dr. Rachoti Devaru**
Guest Faculty, DOS in Sanskrit, UoM.



Published by :
**Divya R.**
Managing Trustee, Patashala Trust
'A' Cross, Mysuru Road, Bengaluru-26

ISBN No : 978-81-930910-8-1

Pages : 4 + X + 286 = 300
First Edition : 2019


Copy Right : Author


Copies : 100 copies
Price : 300
Printing : Tara Prints, Mysuru

| | | | |
|---|---|---|---|
| **English Articles** | | | |
| 16 | Vishwanatha Bhat | **Groundwater Exploration in Brihatsamhita: An Indicator-Based Approach** | 98 |
| 17 | Dr Mallikarjun B S | **Concept of Water in Upanishads** | 106 |
| 18 | Sowmya S N & Srikanth N Jois | **Connectedness of Concept of Water in Sanskrit literature and Pranic Healing** | 111 |
| 19 | Dr Divya Jyothi | **Concept Of Water In Ayurvedic Literature** | 118 |
| 20 | Dr V Venkatraman Bhat | **Water : The Womb Of Creation** | 128 |
| 21 | Mahesh M S | **Water: A Medium to Transfer Prana Shakti** | 131 |
| 22 | Dr Nagalakshmi S | **Importance of Water according to Rig Veda** | 141 |
| 23 | Dr R Suresha | **Thirst for Water** | 147 |
| **Kannada Articles** | | | |
| 24 | Dr Suresh Hegde | **ಸಂಸ್ಕೃತ ಸ್ತೋತ್ರಕಾವ್ಯದಲ್ಲಿ ಜಲ ವಿಮರ್ಶೆ** | 154 |
| 25 | Dr Shanti Sagar | **ಜೈನ–ಸಂಸ್ಕೃತ ವಾಙ್ಮಯದಲ್ಲಿ ನೀರಿನ ಸ್ವರೂಪ ಮತ್ತು ಅದರ ಸಂರಕ್ಷಣೆ** | 159 |
| 26 | Vasantha Lakshmi | **ವೈದಿಕ ವಾಙ್ಮಯದಲ್ಲಿ ಜಲಚಿಂತನೆ ಮತ್ತು ಪ್ರಸ್ತುತತೆ** | 168 |
| 27 | Vidwan Dr Prabhu Swamy | **ಸಂಸ್ಕೃತಸಾಹಿತ್ಯದಲ್ಲಿ ಜಲವಿಚಾರಗಳು** | 173 |
| 28 | Bheema Naik | **ಶಿವತತ್ತ್ವರತ್ನಾಕರದಲ್ಲಿನ ಜಲ ವಿಷಯಚಿಂತನೆ** | 178 |
| 29 | Dr C Parvathi | **ವಿಶ್ವಗುಣಾದರ್ಶಚಂಪೂಕಾವ್ಯದಲ್ಲಿ ಜಲಮೀಮಾಂಸೆ** | 183 |
| 30 | Dr Jayarevanna | **ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಜಲವಿಮರ್ಶೆ** | 189 |

# ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಜಲವಿಮರ್ಶೆ

**ಡಾ. ಜಯರೇವಣ್ಣ ಎಂ ವಿ**
ಸಹಾಯಕ ಪ್ರಾಧ್ಯಾಪಕರು, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ.

**ಪೀಠಿಕೆ :** ಮನುಷ್ಯನ ಜೀವನಕ್ಕೆ ಪಂಚಭೂತಗಳಲ್ಲಿ ಒಂದಾದ ಜಲವು ಅತ್ಯಾವಶಕವಾಗಿದೆ, ಜನಸಂಖ್ಯೆ ಹೆಚ್ಚಿದಂತೆ ನೀರಿನ ಅವಶ್ಯಕತೆ ಅಧಿಕವಾಗಿ ಬೇಕಾಗಿರುವುದರಿಂದ ನೀರಿನ ಅಭವ ಜಾಸ್ತಿಯಾಗುತ್ತದೆ. ಮಾನವ ಕುಲಕ್ಕೆ, ಪ್ರಾಣಿ ಪಕ್ಷಿಗಳ ವರ್ಗಕ್ಕೆ, ಕೃಷಿ ಕಾರ್ಯಕ್ಕೆ ಅತ್ಯಂತ ಉಪಯುಕ್ತವಾದ ವಸ್ತುವಾಗಿದ್ದು; ನೀರಿಲ್ಲದೇ ಜೀವರಾಶಿಗಳ ಜೀವವಿಲ್ಲದಂತಾಗುತ್ತದೆ. ಆದ್ದರಿಂದ ಅಂತರ್ಜಲದ ಸಂರಕ್ಷಣೆ ಮಹತ್ವವಾಗಿದೆ. ನೀರು 'ಜೀವಜಲ'ವಾಗಿದ್ದು; ಈ ಜಗತ್ತಿನಲ್ಲಿ 'ನೀರೇ' ಇಲ್ಲದಿದ್ದರೆ ಏನಾಗುತ್ತಿತ್ತು ? ಎಂದು ಒಂದು ಕ್ಷಣ ಕಲ್ಪಿಸಿಕೊಂಡರೆ ಅದೊಂದು ವಿಸ್ಮಯಕಾರಿಯಾಗುತ್ತದೆ. ನೀರಿನಿಂದಲೇ ಇಳೆ, ನೀರಿನಿಂದಲೇ ಕಳೆ, ನೀರಿನಿಂದಲೇ ಬೆಳೆ, ನೀರಿನಿಂದಲೇ ಪ್ರಕೃತಿಯ ನೆಲೆಯೆಂಬುದು ತಿಳಿದು ಬರುತ್ತದೆ. ಈ ಹಿಂದೆ ತೆರೆದಬಾವಿಗಳೇ ಹೆಚ್ಚಾಗಿರುತ್ತಿದ್ದವು, ಭೂಮಿಯ ಅಂತರಾಳದಲ್ಲಿರುವ ನೀರನ್ನು ಕಂಡುಹಿಡಿಯುವುದು, ಅಲ್ಲಿ ಕೊಳವೆ ಬಾವಿಗಳನ್ನು ತೋಡುವುದು, ಆ ಮೂಲಕ ಶುದ್ಧ ನೀರನ್ನು ಪಡೆಯುವುದು ನಂತರ ದಿನಗಳಲ್ಲಿ ಪ್ರಾರಂಭವಾಯಿತು.

**ಜಲಾಂಶದ ರಚನೆ:** ಈ ಪೃಥ್ವಿಯ ರಚನೆಯಾಗುವುದಕ್ಕೆ ಮುಂಚಿತವಾಗಿ ಅದು ಬರೀ ಮಂಜು ಹಾಗೂ ಮೋಡಗಳಿಂದ ಆವೃತವಾಗಿತ್ತು. ಈ ಭೂಮಿಯ ರಚನೆ ಒಂದು ಅಂಡಕಾರವಾದ ರೂಪ ನಂತರ ನೀರಿನ ಉಗಮ. ಈ ನೀರಿನಿಂದಲೇ "ಪುರುಷ"ನ ಜನನ, ಹಾಗೂ "ಪುರುಷ"ನ ವಿಭಜನೆಯಿಂದ "ಸ್ತ್ರೀಯ" ಜನನ, ಸಕಲ "ಜೀವ"ರಾಶಿಗಳು ನೀರಿನಿಂದಲೇ ಹುಟ್ಟಿದವುಗಳಾಗಿವೆ. ಆದ್ದರಿಂದ ನೀರಿಲ್ಲದೇ "ಜೀವ"ದ ಉತ್ಪತ್ತಿ ಅಸಂಭವನೀಯವೆಂದು ಹೇಳಲಾಗುತ್ತದೆ. ನೀರು ಅತ್ಯಗತ್ಯವಾದ ವಸ್ತುವಾಗಿದ್ದು; ಸಕಲ ಜೀವರಾಶಿಗಳಿಗೂ ಅವಶ್ಯವೆಂದೂ ಹೇಳುತ್ತಾ; ನೀರಿಲ್ಲದೇ ಯಾವ ಜೀವರಾಶಿಗಳಲ್ಲ. ನೀರಿನಲ್ಲಿ ಯಾವುದೇ ಆಹಾರಾಂಶವು ಇರದೇ ಹೋದರೂ ಸಹ, ನೀರಿಲ್ಲದೇ ಯಾವುದೇ ಆಹಾರಾಂಶವೂ ಪ್ರಾಣಿಗಳಲ್ಲಾಗಲಿ ಅಥವಾ ವೃಕ್ಷಗಳಲ್ಲಾಗಲಿ ಪಚನವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಪ್ರಾಣಿಗಳಂತೆ, ಮಾನವನಲ್ಲಿಯೂ ನೀರಿನ ಕ್ರಿಯೆ ನಡೆಯುತ್ತದೆ. ನಿಜವಾಗಿ ಹೇಳುವುದಾದರೆ 60 ರಿಂದ 70 ಪ್ರತಿಶತದಷ್ಟು

ಎಲ್ಲಾ ಪ್ರಾಣೀಗಳಲ್ಲಿ ನೀರಿನ ಅಂಶವುಂಟು. ಮಾನವ ಎಲುಬುಗಳಲ್ಲಿಯೂ ಕೂಡ 20 ಪ್ರತಿಶತದಷ್ಟು ನೀರಿನಾಂಶ ಉಂಟೆಂದು ಹೇಳುತ್ತಾರೆ.

**ವೇದಪುರಾಣಾದಿಕಾವ್ಯಗಳಲ್ಲಿ ನದಿಗಳ ಪರಿಚಯ:**

**ಸಪ್ತದಿವ್ಯನದಿಗಳು:** ವಸ್ವೋಕಸಾರಾನದೀ, ನಲಿನೀನದೀ, ಸರಸ್ವತಿನದೀ, ಜಂಬೂನದೀ, ಸೀತಾನದೀ, ಗಂಗಾನದೀ, ಸಿಂಧೂನದೀ. ಪಾವನಳಾದ ಸರಸ್ವತೀನದೀಯೂ ಅಚಿಂತನೀಯಳು, ದಿವ್ಯಸಂಕಲ್ಪವುಳ್ಳವಳು, ದಿವ್ಯಪ್ರಭಾವಗಳಿಂದ ಕೂಡಿದವಳು ಕೆಲವು ಕಡೆ ಕಾಣಿಸುತ್ತಾ ಅಗೋಚರವಾಗಿ ಹರಿಯುವವಳು, ಮೆಲ್ಕಂಡ ನದಿಗಳು ತ್ರಿಲೋಕಗಳಿಗೂ ಪ್ರಸಿದ್ಧವಾಗಿದೆ.

**ಜಲಭೇದಗಳು:** ದಿವ್ಯ, ಆಂತರಿಕ್ಷ, ನಾದೇಯ, ನಿಷ್ಯಂದ, ಸಾರಸ, ಭೌಮ, ಕೌಂಡ, ತಟಾಕ, ನಿರ್ಝರ, ವೃಕ್ಷಾಂಬು ಮತ್ತು ಹಂಸೋದಕಗಳು ಜಲಭೇದಗಳಿವೆ.

**ದಿವ್ಯಜಲ:** ಸ್ವಾತೀ ನಕ್ಷತ್ರದ ಸಮಯದಲ್ಲಿ ಮೊಡದಿಂದ ಬಂದ ನೀರು ಸೂರ್ಯಕಿರಣಗಳಿಂದ ಮಿಶ್ರಿತವಾಗಿ ಕರ್ಮದ ಸರ್ವದೊಷಗಳನ್ನು ನಿವಾರಿಸುತ್ತದೆ.

**ಅಂತರಿಕ್ಷ ಜಲ:** ಮಳೆಗಾಲದಲ್ಲಿ ಮೊಡದಿಂದ ಬಿದ್ದ ಸ್ಫಟಿಕದಂತಿರುವುದೇ ಅಂತರಿಕ ಜಲವಾಗಿದೆ.

**ನಾದೇಯ ಜಲ:** ಬೆಟ್ಟಗುಡ್ಡ ಪ್ರದೇಶದಲ್ಲಿ ಹುಟ್ಟಿ ಭೂಭಾಗದಲ್ಲಿ ಹರಿಯುವ ಇಂದ್ರನೀಲದಂತೆ ಪರಿಶುದ್ಧವಾದ ಜಲವೇ ನಾದೇಯವಾಗಿದೆ.

**ನಿಷ್ಯಂದ ಜಲ:** ಬೇಸಿಗೆಯ ಕಾಲದಲ್ಲಿ ಮರಳಿನಿಂದ ಹಳ್ಳಮಾಡಿದ್ದಾಗ ಬರುವ ಪರಿಶುದ್ಧವಾದ ಜಲವೇ ನಿಷ್ಯಂದವಾಗಿದೆ.

**ಸಾರಸ ಜಲ:** ದೊಡ್ಡಬೆಟ್ಟಗಳಿಂದ ಹರಿದು ಬಂದು ಒಂದುಕಡೆ ಸೇರಿ ಪಂಕಜ ನೈದಿಲೆಗಳಿಂದ ತುಂಬಿರುವುದೇ ಸಾರಸ ಜಲವಾಗಿದೆ.

**ಭೌಮ ಜಲ:** ಕಲ್ಯಾಣಿ, ಬಾವಿ, ಕೊಣಗಳಲ್ಲಿ ನೈದಿಲೆಗಳಿಂದ ತುಂಬಿರುವುದೇ ಭೌಮ ಜಲವಾಗಿದೆ.

**ಕೌಂಡ ಜಲ:** ಅಗಸ್ತೇ ಹೂವಿನಿಂದ ಪರಿಶುದ್ಧವಾದ ಪರಿಮಳಯುಕ್ತವಾದ ಮಧುರವಾದುದ್ದೇ ಕೌಂಡ ಜಲವಾಗಿದೆ.

**ತಟಾಕ ಜಲ:** ಕೆರೆಕಟ್ಟೆಗಳ ನಿರ್ಮಾಣದಿಂದ ಪ್ರತಿ ವರ್ಷವೂ ಹೊಸ ಹೊಸ ನೀರಿನಿಂದ ಮಿಶ್ರಿತವಾಗಿರುವುದೇ ತಟಾಕ ಜಲವಾಗಿದೆ.

**ನಿರ್ಝರ ಜಲ:** ಎತ್ತರಪ್ರದೇಶದಿಂದ ಕಲ್ಲು ಬಂಡೆಯ ತಪ್ಪಲುಗಳ ಮೂಲಕ ಝರಿಯಾಗಿ ಹರಿಯುವ ನೀರೆ ನಿರ್ಝರ ಜಲವಾಗಿದೆ.

**ಹಂಸೋದಕ ಜಲ:** ಹಗಲು ಸೂರ್ಯನ ತಾಪದಿಂದ ಕಾದು ರಾತ್ರಿ ಚಂದ್ರನ ಕಿರಣಗಳಿಂದ ತಣ್ಣಗಾದ ನೀರಿಗೆ ಹಂಸೋದಕ ಜಲವೇನ್ನುತ್ತೇವೆ.

ಸುಶ್ರುತ ಸಂಹಿತೆಯಲ್ಲಿ ಜಲದ ಪ್ರಭೇದಗಳನ್ನು ಈ ರೀತಿಯಾಗಿ ತಿಳಿಸಿದ್ದಾನೆ; ಧಾರಾಕಾರವಾಗಿ ಬೀಳುವ ಮಳೆಯನ್ನ 'ಧಾರ' ಎನ್ನುತ್ತಾರೆ.

ಆಲಿಕಲ್ಲಿನ ಜಲವನ್ನು 'ಕಾರ'ವೆನ್ನುತ್ತಾರೆ, ಇಬ್ಬನಿಯ ರೂಪದ ಹನಿಗಳಿಂದ ಉತ್ಪನ್ನವಾದ ಜಲವನ್ನು 'ತೌಷಾರ' ಎನ್ನುತ್ತಾರೆ. ಹಿಮಗೆಡ್ಡೆಗಳ ಕರಗುವಿಕೆಯಿಂದ ಬರುವ ಜಲವನ್ನು 'ಹೈಮ'ವೆನ್ನುತ್ತಾರೆ.

**ಮೋಡಗಳ ಉತ್ಪತ್ತಿ:** ಶುಕ್ಲಪಕ್ಷದಲ್ಲಿ ಹುಟ್ಟಿದ ಮೋಡಗಳು ಕೃಷ್ಣಪಕ್ಷದಲ್ಲಿಯೂ, ಕೃಷ್ಣಪಕ್ಷದಲ್ಲಿ ಹುಟ್ಟಿದ ಮೋಡಗಳು ಶುಕ್ಲಪಕ್ಷದಲ್ಲಿಯೂ, ರಾತ್ರಿಯಲ್ಲಿ ಹುಟ್ಟಿದ ಮೋಡಗಳು ಹಗಲಿನಲ್ಲಿಯೂ, ಹಗಲಿನಲ್ಲಿ ಹುಟ್ಟಿದ ಮೋಡಗಳು ರಾತ್ರಿಯಲ್ಲಿಯೂ, ಪೂರ್ವದಿಕ್ಕಿನಲ್ಲಿ ಹುಟ್ಟಿದ ಮೋಡಗಳು ಪಶ್ಚಿಮ ದಿಕ್ಕಿನಲ್ಲಿಯೂ, ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದ ಮೋಡಗಳು ಪೂರ್ವ ದಿಕ್ಕಿನಲ್ಲಿಯೂ ಮಳೆ ಸುರಿಸುತ್ತವೆಂದೂ ಪರಿಣಿತರ ಅಭಿಪ್ರಾಯವಾಗಿದೆ. ಅಶ್ವಿನಿ ನಕ್ಷತ್ರದಲ್ಲಿ ಮೋಡಗಳು ಉಂಟಾದರೆ ನಿಶ್ಚಯವಾಗಿಯೂ ಸುಭಿಕ್ಷವುಂಟಾಗುತ್ತದೆ. ಮಾರ್ಗಶಿರ ಮಾಸದ ತೃತೀಯಾದಿಂದ ಆರಂಭಿಸಿ ನಾಲ್ಕು ದಿನಗಳಲ್ಲಿ ಎಲ್ಲಿ ಮೋಡಗಳುಂಟಾಗುತ್ತವೋ ಅಲ್ಲಿ ನಿಶ್ಚಯವಾಗಿಯೂ ಅಧಿಕವಾಗಿ ಮಳೆಸುರಿಸುತ್ತವೆ. ಶ್ರಾವಣ ಮಾಸದ ಅಮಾವಾಸ್ಯೆಯಲ್ಲಿ ಆಕಾಶವೂ ಹಿಮದಿಂದ ಅವೃತ್ತವಾಗಿದ್ದರೆ, ಆಕಾಶವೂ ಮೋಡಗಳಿಂದಲೂ ತುಂಬಿದ್ದರೆ ಅಲ್ಲಿ ಮಳೆಯೂ ಬೀಳುತ್ತದೆ. ಶ್ರಾವಣ ಪೂರ್ಣಿಮಾದಿನಗಳಲ್ಲಿ ಶ್ರವಣ ನಕ್ಷತ್ರವೂ ಕೂಡಿರುವಾಗ ಹೆಚ್ಚಿನ ಮಳೆಯಾಗುತ್ತದೆ. ಪುಷ್ಯಮಾಸದ ಶುಕ್ಲಪಕ್ಷದ ಪೂರ್ಣಿಮೆಯು ಮೋಡವಾಗುವ ಲಕ್ಷಣವಾಗಿರುತ್ತದೆ.

ಆಷಾಢೇ ಸ್ವಾತಿ ನಕ್ಷತ್ರೇ ನವಮ್ಯಾಂ ಜಲಸಂಭವ: ।
ತತ್ರಾಭ್ರಂ ವಿದ್ಯುದಂಭೋ ವಾ ಧಾನ್ಯನಿಷ್ಪತ್ತಿ ಕಾರಣಮ್ ॥ 71

– ಶ್ರೀ ಶಿವತತ್ತ್ವ ರತ್ನಾಕರ

ಆಷಾಢ ಮಾಸದ ನವಮೀ ತಿಥಿಯಲ್ಲಿ ಸ್ವಾತಿ ನಕ್ಷತ್ರವು ಇದ್ದಾಗ ಮಳೆಯಾಗುವ ಸಂಭವವುಂಟು ಆ ಕಾಲದಲ್ಲಿ ಮಿಂಚಿನಿಂದ ಕೂಡಿದ ಮೋಡಗಳು ಮಳೆ ಸುರಿಸುವುದರಿಂದ ಧ್ಯಾನ್ಯಗಳು ಹುಟ್ಟುವುದಕ್ಕೆ ಕಾರಣವಾಗುತ್ತದೆ.

ಆಷಾಢೇ ಪೂರ್ಣಿಮಾರಾತ್ರೌ ಯದಿ ಚಂದ್ರೋ ನ ದೃಶ್ಯತೇ ।
ಚತುರೋ ಅಪಿ ತಥಾ ಮಾಸಾನ್ ಜಲಂ ವರ್ಷತಿ ವಾಸವ: ॥ 72 –
ಶ್ರೀ ಶಿವತತ್ತ್ವ ರತ್ನಾಕರ

ಆಷಾಢ ಮಾಸದ ಪೂರ್ಣಿಮೆಯ ರಾತ್ರಿಯಲ್ಲಿ ಒಂದು ವೇಳೆ ಚಂದ್ರನು ಕಾಣದಿದ್ದರೆ ಮೋಡಗಳು ಆವೃತವಾದಾಗ ಇಂದ್ರನು 4 ತಿಂಗಳು ಮಳೆಯನ್ನು ಸುರಿಸುತ್ತಾನೆ. ಆವರ್ತ; ಸಂವರ್ತ, ಪುಷ್ಕರ, ದ್ರೋಣ, ಕಾಲಿಕ, ಕಾಲ ನೀಲ, ವಾರುಣ, ವಾಯ್ವಭ್ರ ಎಂಬುದ್ದಾಗಿ ಒಂಬತ್ತು ರೀತಿಯ ಮಹಾ ಮೇಘಗಳು ಉಕ್ತವಾಗಿವೆಯಷ್ಟೆ, ಹಿಂದೆ ಪಾರ್ವತಿ ಪರಮೇಶ್ವರರ ಸಂವಾದ ರೂಪದಲ್ಲಿ ನಡೆದ ಮೇಘಗರ್ಭವು ಮೋಡಗಳ ಉತ್ಪತ್ತಿಗೆ ಮೇಘ ಲೋಕವು ಆಶ್ರಯತಾಣವಾಗಿದೆ. ಪ್ರಾಚೀನ ಕಾಲದ ಔತ್ತರೇಯ ಭಾರತದಲ್ಲಿ

ಹರಿಯುತ್ತಿದ್ದ ಹಲವಾರು ನದಿಗಳ ಹೆಸರು ಉಕ್ತವಾಗಿದ್ದು, ಈ ನದಿಗಳಲ್ಲಿ ಹಲವಾರು ನದಿಗಳು ಕಣ್ಮರೆಯಾಗಿವೆ. ಕೆಲವು ಬೇರೆ ಹೆಸರಿನಿಂದ ಕರೆಯಲಾಗಿದೆ. ಮುಖ್ಯ ನದಿ ಹಾಗೂ ಉಪನದಿಗಳ ಹೆಸರು ಉಕ್ತವಾಗಿದ್ದು ಅವೆಲ್ಲವೂ ಸ್ತ್ರೀವಾಚಕಗಳಾಗಿರುವುದನ್ನು ಗಮನಿಸಬಹುದು. ಹೀಗೆ ಎಲ್ಲಾ ನೂರಾರು, ಸಾವಿರಾರೂ ನದಿಗಳು ಸ್ವಪ್ರಕಾಶವಾಗಿ ತನ್ನಷ್ಟಕ್ಕೆ ತಾವೇ ಹುಟ್ಟಿ ಹರಿದು ಜಗತ್ತಿನ ತಾಯಂದಿರಾಗಿ ಮಹಾಫಲವನ್ನು ಕೊಡುವಂಥದ್ದಾಗಿದೆ.

**ಗಂಗೆಯು ಉದ್ಭವವಾಗು ಸ್ಥಳ :** ತ್ರಿವೇಣಿ ಸಂಗಮ (ಪ್ರಯಾಗ) ಇದನ್ನು ಈಗ ಅಲಹಾಬಾದ್ ಎನ್ನುತ್ತಾರೆ, ಇಲ್ಲಿ ಬ್ರಹ್ಮನು ಅನೇಕ ಯಾಗಗಳನ್ನು ಮಾಡಿರುವುದರಿಂದ ಪ್ರಯಾಗವಾಗಿತ್ತು. ಇದಕ್ಕೆ ಧಾರಾಗಂಜವೆನ್ನುತ್ತಾರೆ. ಇಲ್ಲಿ ಗಂಗಾಯಮುನೆಗಳ ಸಂಗಮ ಮಾತ್ರ ಕಾಣಿಸುತ್ತದೆ. ಸರಸ್ವತಿಯು ಗುಪ್ತಗಾಮಿನಿಯಾಗಿ ಹರಿಯುತ್ತಾಳೆ, ಈ ಸಂಗಮಕ್ಕೆ ತ್ರಿವೇಣಿ ಸಂಗಮವೆನ್ನುತ್ತಾರೆ. ಇಲ್ಲಿ ಭಾಗೀರಥಿಯು ವೇಗವಾಗಿ ಹರಿಯುತ್ತಿದೆ ಇಲ್ಲಿ ತೀರ್ಥಶ್ರಾದ್ಧ ಮಾಡುವರಲ್ಲದೆ, ದಂಪತಿಗಳ ವೇಣಿದಾನದ ಸಮಾರಂಭವೂ ನಡೆಯುತ್ತಿದೆ, ಇಲ್ಲಿ ಮಹಾವಟವೃಕ್ಷದ ಬೇರು ಮಾತ್ರವಿದ್ದು, ರಾಶಿಯಲ್ಲಿ ಅದರ ಮಧ್ಯಭಾಗವೂ ಗಂಗೆಯಲ್ಲಿ ಇದರ ಕೊನೆಯೂ ಇರುವುದು ಕಂಡುಬರುತ್ತದೆ.

ನದೀಷು ದೇವಖಾತೇಷು ತಡಾಗೇಷು ಸರಸ್ಸು ಚ ।

ಸ್ನಾನಂ ಸಮಾಚರನ್ನಿತ್ಯಂ ಗರ್ತಪ್ರಸ್ರವಣೇಷು ಚ ॥ ಮನಸ್ಮೃತಿ

ನದಿಗಳು, ತೀರ್ಥಕ್ಷೇತ್ರಗಳು ಅಂದರೆ ಪವಿತ್ರ ತೀರ್ಥಗಳಲ್ಲಿ ಕೆರೆಗಳಲ್ಲಿ ಸರೋವರಗಳಲ್ಲಿ ಮಡು ಮತ್ತು ಝರಿಗಳಲ್ಲಿ ನಿತ್ತವೂ ಸ್ನಾನ ಮಾಡಬೇಕು ಎಂಬುದಾಗಿ ಹೇಳಿ ಅಲ್ಲಿನ ನೀರಿಗೆ ವಿಶೇಷವಾಗ ದೈವಿಕ ಶಕ್ತಿಯಿದೆ ಎಂದು ಹೇಳುತ್ತಾರೆ, ಇತ್ತೀಚೆಗೆ ನೆಡೆದ ಪ್ರಯಾಗದ ಕುಂಭಮೇಳದಲ್ಲಿ ಮತ್ತು ತಿರುಮಕೂಡಲಿನ ಕುಂಭಮೇಳದಲ್ಲಿ ಭಾಗವಹಿಸಿದ ಸಾಧು ಸಂತರು, ಅಘೋರಿಗಳು, ಸ್ವಾಮೀಜೀಗಳು, ಲಕ್ಷಾಂತರ ಜನರು ಭಾಗವಹಿಸಿ ಪುಣ್ಯ ಸಂಪಾದನೆಗಾಗಿ, ಮೋಕ್ಷ ಪ್ರಾಪ್ತಗಾಗಿ, ಕರ್ಮ ವಿಮೋಚನೆಗಾಗಿ ಗಂಗಾಸ್ನಾನವನ್ನು ಮಾಡಿರುವುದನ್ನು ಪ್ರತ್ಯಕ್ಷವಾಗಿ ನೋಡಬಹುದಾಗಿದೆ.

**ಕುಡಿಯುವ ನೀರು ಹಾಗೂ ಅದರ ಪರಿಶುದ್ದತೆ:** ಸಾಮಾನ್ಯವಾಗಿ ನಾವು ಕುಡಿಯಲು ಬಳಸುವ ನೀರಿನಲ್ಲಿ ಮಳೆಯ ನೀರೇ ಅತ್ಯಂತ ಪರಿಶುದ್ದವಾಗಿದೆ. ನದಿಗಳ ನೀರನ್ನು ಶೋಧಿಸಿ (ಸೋಸಿ) ಕುಡಿಯುವುದು ಒಳ್ಳೆಯದು, ಭೂಮಿಯೊಳಗೆ ಇರುವ ನೀರನ್ನು ಕಾಯಿಸಿ ನಂತರ ಸೇವಿಸುವುದು ಆರೋಗ್ಯಕರವಾಗುತ್ತದೆ. ಶುದ್ಧ ನೀರನ್ನು ಶುಭ್ರವಾದ ಪಾತ್ರೆಯಲ್ಲಿಡುವುದು ಸೂಕ್ತವಾಗಿದೆ ಹಾಗೆ ಅದೇ ನೀರನ್ನು ಕುಡಿಯಲು ಬಳಸುವುದು ಯೋಗ್ಯವಾಗಿದೆ, ನೀರನ್ನು ಕುದಿಸುವುದರಿಂದ ನೀರಿನಲ್ಲಿರುವ ಕ್ರಿಮಿಕೀಟಗಳನ್ನು ನಾಶಮಾಡಲು ಸಾಧ್ಯವಾಗುತ್ತದೆ.

**ಜಲದ ಉಪಯೋಗ:**

ನೈರ್ಮಲ್ಯಂ ಭಾವಶುದ್ಧಿಶ್ಚ ವಿನಾ ಸ್ನಾನಂ ನ ಯುಜ್ಯತೇ ।
ತಸ್ಮಾತ್ಕಾಯವಿಶುದ್ಧ್ಯರ್ಥಂ ಸ್ನಾನಮಾದ್ ವಿಧೀಯತೇ ॥ ಭವಿಷ್ಯ ಪುರಾಣ

ಶೌಚ ಮತ್ತು ಆಚಮನಗಳಿಗೂ ನೀರು ಬೇಕು, ಶರೀರ ಮತ್ತು ಮನಸ್ಸುಗಳ ನಿರ್ಮಲತೆ ಮತ್ತು ಭಾವಶುದ್ಧಿಗಳು ಸ್ನಾನವಿಲ್ಲದೆ ಸಂಭವಿಸುವುದಿಲ್ಲ, ಶರೀರ ಮತ್ತು ಮನ ಸಂಬಂಧವಾದ ಕಾರ್ಯಗಳ ಶುದ್ಧಿಗಾಗಿ ಸ್ನಾನ ಅತ್ಯಂತ ಅವಶ್ಯ ಹಾಗಾಗಿ ನೀರಿನ ಮಹತ್ತ್ವ ಅತ್ಯಾವಶಕವಾಗಿದೆ. ಆಹಾರ ತಯಾರಿಕೆಗಾಗಿ ಮತ್ತು ಸೇವನೆಗಾಗಿ, ವಿದ್ಯುತ್ ಉತ್ಪಾದನೆಗಾಗಿ, ಕೃಷಿ ಕ್ಷೇತ್ರದಲ್ಲಿ ಫಸಲು ಉತ್ಪಾದನೆಗಾಗಿ, ಕೈಗಾರಿಕೆಗಳ ಮತ್ತು ಕಾರ್ಖಾನೆಗಳ ಉಪಯೋಗಕ್ಕಾಗಿ, ಗೃಹನಿರ್ಮಾಣಕ್ಕಾಗಿ, ಔಷಧಿಗಳ ಉಪಯೋಗಕ್ಕಾಗಿ, ವಸ್ತುಗಳ ತಯಾರಿಕೆಗಾಗಿ, ಪ್ರಾಣಿಪಕ್ಷಿಗಳ ಹಾಗೂ ಮಾನವ ಜೀವನೋಪಾಯಕ್ಕಾಗಿ, ತರ್ಪಣಾಧಿ ಕರ್ಮಗಳಿಗೆ, ಪಿಂಡ ವಿಸರ್ಜನೆಗಾಗಿ, ಆಧ್ಯಾತ್ಮಿ ಸಾಧನೆಗಾಗಿ, ಗಂಗಾಪೂಜೆ, ಪೂಜಾದಿಪುಣ್ಯ ಪುರಸ್ಕಾರಗಳಾದ ಪುಣ್ಯ ನಾಂದಿ, ಯಜ್ಞಯಾಗಾದಿಗಳೂ, ಇತ್ಯಾದಿ ಧಾರ್ಮಿಕ ಕಾರ್ಯಗಳಿಗೆ, ಜಲದ ಬಳಕೆಯೂ ಅತ್ಯಂತ ಶ್ರೇಷ್ಠವಾದ ಪವಿತ್ರವಾದ ಸ್ಥಾನವನ್ನು ಪಡೆದಿದೆ; ಸೂರ್ಯನಿಂದ ಅಂಧಕಾರ ನಿವಾರಣೆ ಹೇಗೆ ಸಾಧ್ಯವೋ ಅದೇ ರೀತಿ ಜಲದಿಂದ ಮೇಲೆ ತಿಳಿಸಿದ ಕಾರ್ಯವು ಸಾಧ್ಯವಾಗುತ್ತದೆ.

**ಜಲ ಸಂರಕ್ಷಣೆ:** ಕೆರೆ ಕಟ್ಟೆಗಳ, ಹೊಂಡಗಳ ನಿರ್ಮಾಣದಿಂದ, ಹಳಕೊಳ್ಳದಿಂದ ಬರುವ ನೀರಿನ ಸಂರಕ್ಷಣೆಯಿಂದ, ಪ್ರಾಕೃತಿಕ ಸಂಪನ್ಮೂಲಗಳ ಬಳಕೆ ಮತ್ತು ಹಕ್ಕು ಮತ್ತು ಸಂರಕ್ಷಣೆಯಿಂದ, ಕೃಷಿ ಕ್ಷೇತ್ರದಲ್ಲಿ ಆಧುನಿಕ ಯಂತ್ರೋಪಕರಣ ಮತ್ತು ತಂತ್ರಜ್ಞಾನದ ಬಳಕೆಯಿಂದ, ಬೋರು, ಪಂಪಸೆಟ್ಟ್‌ಗಳ ಅಕ್ಕಪಕ್ಕದಲ್ಲಿ ನೀರನ್ನು ಹಿಂಗುವಂತೆ, ಜಿನುಗುವಂತೆ, ಬಸಿಯುವಂತೆ ಮಾಡುವುದರಿಂದ, ಅನಾವಶ್ಯಕವಾಗಿ ವ್ಯಯಮಾಡದೇ ಮಿತವಾಗಿ ಜಲವನ್ನು ಬಳಸುವುದರಿಂದ, ನೀರಿನ ಸಂರಕ್ಷಣೆ ಸಾಧ್ಯವಾಗುತ್ತದೆ. ಅಂತರ್ಜಲ ಚಕ್ರವು ಮಳೆ ರೂಪದಲ್ಲಿ ಇದ್ದ ನೀರಿನ ಒಂದು ಭಾಗವು ಭೂಮಿಯ ಮೇಲ್ಮೈಯಲ್ಲಿ ಹರಿದು ಹಳ್ಳ, ಕೊಳ್ಳ, ಕೆರೆ, ನದಿ. ಸಮುದ್ರಗಳನ್ನು ಸೇರಿದರೆ ಇನ್ನೊಂದು ಭಾಗವು ಮಣ್ಣಿನೊಳಕ್ಕೆ ಹಿಂಗಿ ಗಟ್ಟಿ ಬಂಡೆ ಪದರ ಎದುರಾದಾಗ ಇಳಿಜಾರುಗುಂಟ ಪಕ್ಕಕ್ಕೆ ಸರಿದು ಜಿನುಗು, ಬಸಿ, ಉಜೆಯ ರೂಪದಲ್ಲಿ ಹೊರಬಂದು ಜಲಚಕ್ರವನ್ನು ಸೇರುತ್ತವೆ ಇದರ ಸಂರಕ್ಷಣೆ ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ.

**ಜಲಮೋಡಗಳ ಸ್ವರೂಪ:** ಮೋಡಗಳು ಬಿಳಿಯ ಅಥವಾ ಹಳದಿಯ ಬಣ್ಣದವುಗಳಾಗಿದ್ದರೆ ಕೆಲವು ಕಡೆ ಮಳೆಯಾಗುತ್ತದೆ. ಕಪ್ಪು ಬಣ್ಣದ, ಕಂಚಿನ ಬಣ್ಣದ ಅಥವಾ ಕೆಂಪು ಬಣ್ಣದ ಮೋಡಗಳು ಕೆಲವು ಹಾಗೆಯೇ ಸಿಂಧೂರ

ಬಣ್ಣಕ್ಕೆ ಸಮಾನಾದವುಗಳು ಕೂಡ ಕಾರ್ತಿಕ ಮಾಸದಲ್ಲಿ ಮೋಡಗಳ ಗರ್ಭಲಕ್ಷಣವಿರುತ್ತದೆ. ಮೋಡಗಳ ಉತ್ಪತ್ತಿ ವಿಚಾರ ಹಾಗೂ ಗಂಗೆಯು ಉದ್ಭವವಾಗು ಸ್ಥಳ, ಮತ್ತು ಕುಡಿಯುವ ನೀರು ಹಾಗೂ ಅದರ ಪರಿಶುದ್ಧತೆ, ಜಲದ ಮಹತ್ವ, ಹೈಡ್ರೋಥೆರಪಿ-ಜಲಚಿಕಿತ್ಸೆಗಳಿಂದ ರೋಗನಿವಾರಣೆಗಾಗಿ ಬಳಕೆ, 'ಅಗಸ್ತ್ಯೋದಯೆ ವಿಷಶುದ್ಧಿ:' ಎಂಬಂತೆ ಶರತ್ಕಾಲದಲ್ಲಿ ಅಗಸ್ತ್ಯ ನಕ್ಷತ್ರ ಉದಯಿಸಲು ಜಲ ಪರಿಶುದ್ಧವಾಗುತ್ತದೆ. ನೀರು ಅಮೃತವೂ ಹೌದು, ವಿಷವೂ ಹೌದು ಎಂಬುದನ್ನು ಈ ಕೆಳಗಿನ ಶ್ಲೋಕದಲ್ಲಿ ನಿರೂಪಿಸಲಾಗಿದೆ.

**ಉಪಸಂಹಾರ:** ಸೃಷ್ಟಿಯ ಮೂಲ ಜಲವಾಗಿದ್ದು ಜೀವ ಸಂಕುಲಕ್ಕೆ ಮೂಲಧಾರವಾಗಿ; ಈ ಪ್ರಪಂಚದ ಶೇ 85 ರಷ್ಟು ಭಾಗ ನೀರಿನಿಂದ ಆವೃತ್ತವಾಗಿರುವಂತೆ, ನಮ್ಮ ದೇಹವು ಸಹ ಶೇ. 75 ಭಾಗ ನೀರಿನಿಂದ ಆವ್ರತ್ತವಾಗಿದೆ. ಈ ಪೃಥ್ವಿಯ ರಚನೆಯಾಗುವುದಕ್ಕೆ ಮುಂಚಿತವಾಗಿ ಅದು ಬರೀ ಮಂಜು ಹಾಗೂ ಮೋಡಗಳಿಂದ ಆವೃತವಾಗಿತ್ತು. ವೇದಪುರಾಣಾದಿಕಾವ್ಯಗಳಲ್ಲಿ ನದಿಗಳ ಪರಿಚಯವಿದ್ದು, ಭಾರತ ದೇಶವು ಮುಖ್ಯವಾಗಿ ನೈರುತ್ಯ ದಿಕ್ಕಿನಿಂದ ಬೀಸುವ ಮಾನ್ಸೂನ್ ಮಾರುತವು ತರುವ ಮಳೆಗಳ ಮೇಲೆ ಶೇ 70 ಹಾಗೂ ಈಶಾನ್ಯ ಮಾರುತಗಳು ತರುವ ಮಳೆಗಳ ಮೇಲೆ ಶೇ 30 ಅವಲಂಬಿಸಿದೆ. ಈ ಮಾರುತ ಮಳೆಗಳ ವೈಶಿಷ್ಟ್ಯವೆಂದರೆ ಪೆಸಿಫಿಕ್ ಸಮುದ್ರದಲ್ಲಿ ಕಂಡು ಬರುವ ವಿಚಾರದ ಬಗ್ಗೆ ಪ್ರಸ್ತಾಪಿಸಲಾಗಿದೆ. ಸಪ್ತದಿವ್ಯನದಿಗಳು, ಜಲಭೇದಗಳು, ದಿವ್ಯ, ಆಂತರಿಕ್ಷ, ನಾದೇಯ, ನಿಷ್ಯಂದ, ಸಾರಸ, ಭೌಮ, ಕೌಂಡ, ತಟಾಕ, ನಿರ್ಝರ, ವೃಕ್ಷಾಂಬು ಮತ್ತು ಹಂಸೋದಕಗಳು ಜಲಭೇದಗಳಿವೆ.

**ಪರಮರ್ಶನ ಗ್ರಂಥಗಳು :**


- ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ – ಡಾ. ಕೆ. ಕೃಷ್ಣಮೂರ್ತಿ, ಎನ್. ರಂಗನಾಥ ಶರ್ಮ.
- ಸಂಸ್ಕೃತ ಸಾಹಿತ್ಯದ ಇತಿಹಾಸ– ಆಚಾರ್ಯ ಬಲದೇವ ಉಪಾಧ್ಯಾಯ, ಅನುವಾದಕ–ಎಸ್. ರಾಮಚಂದ್ರಶಾಸ್ತ್ರಿ.
- ಶ್ರೀ ಶಿವತತ್ತ್ವ ರತ್ನಾಕರ: ಸಂಪುಟ1 ರಿಂದ 5, ಪ್ರೋ. ಮಲ್ಲೇಪುರಂ ಜಿ. ವೆಂಕಟೇಶ, ಬೆಂಗಳೂರು.
- ಹ್ಯಾಂಡ್ ಬುಕ್ ಆಫ್ ಅಗ್ರಿಕಲ್ಚರ್, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ.
- ನೀರಾವರಿ– ಮೂರ್ತಿ ಎನ್.ಎನ್. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಅಂತರ್ಜಲ ಶೋಧ ಮತ್ತು ಸಂರಕ್ಷಣೆ– ಪ್ರಕಾಶಚಂದ ಜೈನ್, ಸಾಹಿತ್ಯ ಪ್ರಕಾಶನ ಹುಬ್ಬಳಿ.

- ಕಾಳಿದಾಸನ ನಾಟಕ ವಿಮರ್ಶೆ–ಎಸ್.ವಿ.ರಂಗಣ್ಣ, ಹೇಮಂತ ಸಾಹಿತ್ಯ, ಕಾಟನ್ ಪೇಟೆ, ಬೆಂಗಳೂರು.
- ಉಪನಿಷತ್ತಿನ ಸ್ವಾರಸ್ಯ ಕಥೆಗಳು–ಕೃ. ನಾರಾಯಣರಾವ್, ವೆಂಕಟಾದ್ರಿ ಪ್ರಕಾಶನ, ಬಸವನಗುಡಿ, ಬೆಂಗಳೂರು.
- ಮನುಸ್ಮೃತಿ ಮತ್ತು ಯಾಜ್ಞವಲ್ಕ್ಯ ಸ್ಮೃತಿ–ಸಾಹಿತ್ಯ ಪ್ರಕಾಶನ ಹುಬ್ಬಳಿ.
- ವಾಲ್ಮೀಕಿ ರಾಮಾಯಣ ಮತ್ತು ವ್ಯಾ ಮಹಾಭಾರತ–ಭಾರತ ಭಾರತಿ ಪ್ರಕಾಶನ, ಬೆಂಗಳೂರು.